RNU AIR DHARWAD

# APRIL 17, 2026

## AKASHAVANI - DHARWAD

## PRADESH SAMACHARA (KANNADA) 12.00 P.M.

<><><>

ಆಕಾಶವಾಣಿ

ಪ್ರದೇಶ ಸಮಾಚಾರ

<><><>

ಲೋಕಸಭೆ ಹಾಗೂ ರಾಜ್ಯ ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಶೇಕಡ 33 ರಷ್ಟು ಮೀಸಲಾತಿ ಕಲ್ಪಿಸುವ, 'ನಾರಿ ಶಕ್ತಿ ವಂದನ ಅಧಿನಿಯಮ' ಸೇರಿದಂತೆ ಒಟ್ಟು ಮೂರು ಮಸೂದೆಗಳ ಕುರಿತು ಇಂದು ಲೋಕಸಭೆಯಲ್ಲಿ ಚರ್ಚೆ ಮುಂದುವರಿದಿದೆ. ಸಂಜೆ 4 ಗಂಟೆಗೆ ಕ್ಷೇತ್ರ ಪುನರ ವಿಂಗಡಣೆ ಸೇರಿದಂತೆ ಒಟ್ಟು ಮೂರು ವಿಧೇಯಕಗಳ ಅಂಗೀಕಾರಕ್ಕಾಗಿ ಮತದಾನ ನಡೆಯಲಿದೆ.

<><><>

ರಾಜಕೀಯ ಕ್ಷೇತ್ರದಲ್ಲಿ ಮಹಿಳೆಯರಿಗೆ ಮೀಸಲಾತಿ ಕಲ್ಪಿಸುವ ಉದ್ದೇಶದಿಂದ, ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಜಾರಿಗೊಳಿಸಲು ಮುಂದಾಗಿರುವ, 'ನಾರಿ ಶಕ್ತಿ ವಂದನ' ವಿಧೇಯಕವನ್ನು ಬೆಂಬಲಿಸಿ, ಬೆಳಗಾವಿ ದಕ್ಷಿಣ ವಿಧಾನ ಸಭಾ ಕ್ಷೇತ್ರದಲ್ಲಿ, ಮಹಿಳೆಯರು ಬೃಹತ್ ಬೈಕ್ ರ್‍ಯಾಲಿ ಆಯೋಜಿಸಿದರು. ಮಹಾನಗರ ಪಾಲಿಕೆ ಉಪ ಮಹಾಪೌರರಾದ ಪ್ರೀತಿ ಕಾಮಕರ, ಬೆಳಗಾವಿ ನಗರ ಬಿಜೆಪಿ ಅಧ್ಯಕ್ಷೆ ಗೀತಾ ಸುತಾರ ಸೇರಿದಂತೆ ಸಾವಿರಾರು ಮಹಿಳೆಯರು ಪಾಲ್ಗೊಂಡಿದ್ದರು. ಈ ಕುರಿತು ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಕ್ಷೇತ್ರದ ಶಾಸಕ ಅಭಯ ಪಾಟೀಲ್

<><><>

ಅಭಯ ಪಾಟೀಲ್ ಧ್ವನಿ– 35 ಸೆಕೆಂದುಗಳು

<><><>

ಜನಗಣತಿ 2027ರ, ಮೊದಲ ಹಂತದ ಭಾಗವಾಗಿ, 'ಮನೆಪಟ್ಟಿ ಮತ್ತು ವಸತಿ ಗಣತಿ' ಕಾರ್ಯ, ರಾಜ್ಯದಲ್ಲಿ ಪ್ರಾರಂಭವಾಗಿವೆ. ಈ ಅಭಿಯಾನ, ಮೇ 15ರ ವರೆಗೆ, ಒಟ್ಟು 30 ದಿನಗಳ ಕಾಲ ನಡೆಯಲಿದೆ. ತರಬೇತಿ ಪಡೆದ ಗಣತಿದಾರರು, ದತ್ತಾಂಶ ಸಂಗ್ರಹಣೆಗಾಗಿ, ಮನೆ ಮನೆಗೆ ಭೇಟಿ ನೀಡಲಿದ್ದಾರೆ. ಮೊದಲ ಬಾರಿಗೆ ಪರಿಚಯಿಸಲಾದ, 'ಸ್ವಯಂ–ಎಣಿಕೆ' ಸೌಲಭ್ಯದಡಿ, ತಮ್ಮ ವಿವರಗಳನ್ನು, ಆನ್‌ಲೈನ್‌ನಲ್ಲಿ ಯಶಸ್ವಿಯಾಗಿ ಸಲ್ಲಿಸಿದವರು, ತಮ್ಮ 'ಸೆಲ್ಫ್ ಎನ್ಯೂಮರೇಶನ್ ಐಡಿ' ಸಿದ್ಧವಾಗಿಟ್ಟುಕೊಂಡು, ಗಣತಿದಾರರು ಮನೆಗೆ ಬಂದಾಗ ಹಂಚಿಕೊಳ್ಳಲು ಸೂಚಿಸಲಾಗಿದೆ. ಭೌತಿಕ ಗಣತಿಗೂ ಅವಕಾಶವಿರಲಿದೆ.

<><><>

ಇಂದು ಭಾರತದ ಮಾಜಿ ರಾಷ್ಟ್ರಪತಿ ಹಾಗೂ ಶಿಕ್ಷಣ ತಜ್ಞ ಡಾಕ್ಟರ ಸರ್ವೇಪಲ್ಲಿ ರಾಧಾಕೃಷ್ಣನ್ ಅವರ ಪುಣ್ಯತಿಥಿ. ಶ್ರೇಷ್ಠ ಚಿಂತಕ, ಆದರ್ಶ ಶಿಕ್ಷಕರಾಗಿದ್ದ ರಾಧಾಕೃಷ್ಣನ್, ದೇಶದ ಉಪ ರಾಷ್ಟ್ರಪತಿ ಹಾಗೂ ರಾಷ್ಟ್ರಪತಿಗಳಾಗಿಯೂ ಸೇವೆ ಸಲ್ಲಿಸಿದ್ದರು.

ಭಾರತ ರತ್ನ ಡಾಕ್ಟರ ಸರ್ವೇಪಲ್ಲಿ ರಾಧಾಕೃಷ್ಣನ್ ಅವರ ಪುಣ್ಯಸ್ಮರಣೆಯಂದು ಅವರ ಅನುಪಮ ಕೊಡುಗೆಗಳನ್ನು ಸ್ಮರಿಸಿರುವ ಗಣ್ಯರು ಗೌರವ ನಮನಗಳನ್ನು ಸಲ್ಲಿಸಿದ್ದಾರೆ.

<><><>

ಮಾಜಿ ಪ್ರಧಾನಮಂತ್ರಿ ಚಂದ್ರಶೇಖರ ಅವರ 99 ನೇ ಜನ್ಮದಿನಾಚರಣೆ ಹಿನ್ನೆಲೆ, ಉಪ ರಾಷ್ಟ್ರಪತಿ ಸಿ.ಪಿ ರಾಧಾಕೃಷ್ಣನ್ ಹೊಸದಿಲ್ಲಿಯ ಜನನಾಯಕ ಸ್ಥಳಕ್ಕೆ ಭೇಟಿ ನೀಡಿ, ಅವರ ಸ್ಮಾರಕಕ್ಕೆ ಪುಷ್ಪ ನಮನ ಸಲ್ಲಿಸಿದರು.

<><><>

ಧಾರವಾಡ ಜಿಲ್ಲೆ, ಹುಬ್ಬಳ್ಳಿಯ, ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆ, ಕೇಂದ್ರ ಕೈಗಾರಿಕೆ ಮತ್ತು ವಾಣಿಜ್ಯ ಸಚಿವಾಲಯದ ಸಹಯೋಗದಲ್ಲಿ, *ಇನ್‌ಕಾಮೆಕ್ಸ್ –2026,* ಕೈಗಾರಿಕಾ ವಸ್ತು ಪ್ರದರ್ಶನ ಮೇಳವನ್ನು, ಈ ತಿಂಗಳ 25 ರಿಂದ 29ರ ವರೆಗೆ, ಅಮರಗೋಳದ, ಹುಬ್ಬಳ್ಳಿ ಧಾರವಾಡ ವಿವಿಧೋದ್ದೇಶ ವಸ್ತು ಪ್ರದರ್ಶನ ಕೇಂದ್ರದಲ್ಲಿ ಆಯೋಜಿಸಿದೆ.

<><><>

ಧಾರವಾಡ ಜಿಲ್ಲಾ ಪಂಚಾಯತ್ ಮಾಜಿ ಸದಸ್ಯ ಯೋಗೇಶ ಗೌಡ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ, ಮಾಜಿ ಸಚಿವ ಹಾಗೂ ಹಾಲಿ ಶಾಸಕ ವಿನಯ ಕುಲಕರ್ಣಿ ಸೇರಿದಂತೆ, 17 ಅಪರಾಧಿಗಳ ಶಿಕ್ಷೆ ಪ್ರಮಾಣ ಇಂದು ಪ್ರಕಟವಾಗಲಿದೆ.

<><><>

ಬೀದರ ಜಿಲ್ಲೆ, ಕಾರಂಜಾ ಜಲಾಶಯದಿಂದ, ಹಾಲಹಳ್ಳಿ ಬ್ಯಾರೇಜ್‌ಗೆ, ಸೊನ್ನೆ ದಶಾಂಶ 4–0 ಟಿ.ಎಂ.ಸಿ. ಅಡಿ ನೀರನ್ನು, ಹಂತ ಹಂತವಾಗಿ ಹರಿಸಲಾಗುತ್ತಿದೆ. ನದಿ ಪಾತ್ರದ ಜನ ಮುಂಜಾಗ್ರತೆ ವಹಿಸುವಂತೆ, ನೀರಾವರಿ ನಿಗಮ ನಿಯಮಿತದ, ಕಾರ್ಯಪಾಲಕ ಅಭಿಯಂತರರು, ಮನವಿ ಮಾಡಿದ್ದಾರೆ.

<><><>

ಬೀದರ, ಶಾಹೀನ್ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ, ಡಾಕ್ಟರ್ ಅಬ್ದುಲ್ ಖದೀರ್ ಅವರನ್ನು, ಫೋರ್ಬ್ಸ್ ಇಂಡಿಯಾ ನಿಯತಕಾಲಿಕೆ, 'ಲೀಡರ್ ಆಫ್ ಟುಮಾರೋ' ಎಂದು ಗುರುತಿಸಿದೆ.

<><><>

ತುಮಕೂರು ಜಿಲ್ಲೆ, ಮಧುಗಿರಿಯ ಅಪರ ಸಿವಿಲ್ ನ್ಯಾಯಾಧೀಶರಾಗಿದ್ದ, ಕಾಂತಮ್ಮ ತೀವ್ರ ಹೃದಯಾಘಾತದಿಂದ, ಮೃತಪಟ್ಟಿದ್ದಾರೆ. ಅವರಿಗೆ 43 ವರ್ಷ ವಯಸ್ಸಾಗಿತ್ತು. ಅವರ ಸ್ವಗ್ರಾಮ, ಮಂಡ್ಯ ಜಿಲ್ಲೆ, ಮಳವಳ್ಳಿ ತಾಲೂಕು, ಅಂಚೆದೊಡ್ಡಿ ಗ್ರಾಮದಲ್ಲಿ, ಪಾರ್ಥಿವ ಶರೀರದ ಅಂತ್ಯಕ್ರಿಯೆ ನಡೆಯಲಿದೆ ಎಂದು, ಕುಟುಂಬ ತಿಳಿಸಿದೆ.

<><><>

ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಒಕ್ಕೂಟವು ಆಯೋಜಿಸಿದ್ದ, ಜಾಗತಿಕ ಸುಸ್ಥಿರ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ಶೃಂಗಸಭೆಯ ಪೂರ್ವಭಾವಿ ಕಾರ್ಯಕ್ರಮವನ್ನು, ಬೆಂಗಳೂರಿನಲ್ಲಿ ಆಯೋಜಿಸಲಾಯಿತು. ಶೃಂಗಸಭೆಯ ಲಾಂಛನ ಹಾಗೂ ಭಿತ್ತಿಪತ್ರಗಳನ್ನು ಅರಣ್ಯ, ಜೀವಿಶಾಸ್ತ್ರ, ಪರಿಸರ ಸಚಿವ ಈಶ್ವರ ಖಂಡ್ರೆ ಬಿಡುಗಡೆಗೊಳಿಸಿದರು.

<><><>

ಚಿಕ್ಕಮಗಳೂರು ಜಿಲ್ಲೆ, ಗ್ರಾಮ ಪಂಚಾಯಿತಿಗಳಲ್ಲಿ ಮಕ್ಕಳಿಗಾಗಿ ಈ ತಿಂಗಳ 29 ರ ವರೆಗೆ ವಿಶೇಷ ಬೇಸಿಗೆ ಶಿಬಿರ ಆಯೋಜಿಸಲಾಗಿದ್ದು, ಇದರ ಪ್ರಯೋಜನ ಪಡೆಯುವಂತೆ ಜಿಲ್ಲಾ ಪಂಚಾಯತ್ ಸಿ.ಇ.ಓ ಕೀರ್ತನಾ ಕೋರಿದ್ದಾರೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ

<><><>